dac385
T-P-2

R No KRNN 12 21 - 10 -1974

in ★ ★ ★ ★ ★
58 th Year
ನೇ ವರ್ಷ

ಸ್ವರ್ಣ ಮಹೋತ್ಸವ ನೆರವೇರಿಸಿದ ಪತ್ರಿಕೆ

ಸತ್ಯವಾದಿ
SATYAVADI

Golden Jubilee Celebrated Paper
Satyavadi Daily
Mysore 4
- For Influential Publicity -

ಸ್ಥಾಪಕರು: ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾವ್ ಸಂಪಾದಕರು: ಧರ್ಮಪ್ರಚಾರಧುರೀಣ ಎಂ. ಎಸ್. ಕೃಷ್ಣರಾವ್ [3 ಪೈಸೆ

ಜಯಪ್ರಕಾಶರ ಚಳುವಳಿ ಎದುರಿಸಲು ಕಾಂಗ್ರೆಸಿನ ನಿರ್ಧಾರ

ನಳಿನ ಸತ್ಯವಾದಿ ಸ್ಥಾಪಕರ ದಿನಾಚರಣೆ

ಲೋಕದಳದ ಅದ್ದೂರಿ ವಿಜಯ

ಭುವನೇಶ್ವರ– ಇಲ್ಲಿಯ ನೋಟಿಫೈಡ್ ಪ್ರದೇಶದಲ್ಲಿನ ಪ್ರಪ್ರಥಮ ಚುನಾವಣೆಯಲ್ಲಿ ಲೋಕ ದಳವು 13 ಸ್ಥಾನ ಗಳಿಸಿತು, ಕಾಂಗ್ರೆಸ್‌ಗೆ ಕೇವಲ ಎಂಡು ಸ್ಥಾನಗಳು ಸಿಕ್ಕಿತು.

★

ಸತ್ತಿರುವನು – ಬದುಕಿರುವನು !

ಕೊಪಿಕೋಡ್ — ಚಿನ್ನ ಕಳ್ಳಸಾಗಾಣಿಕೆಯಲ್ಲಿ ಆರೋಪಿತನಾಗಿರುವ ಮಹಮದ್ ಗೌಸ್ ಎಂಬಾತನ ಬಗ್ಗೆ ಕೆಲ ಕಾಲದ ಹಿಂದೆ ಅವನು ಸತ್ತಿರುವನೆಂಬ ಸರಿಯಾದ ಕಾಗದ ಪತ್ರವನ್ನು ಅವನ ಸೋದರನು ಹಾಜರ್ಪಡಿಸಿದರಿಂದ ರೂ. 15000 ಮೌಲ್ಯದ ಹೆಣ ಉಳಿಯಿತು – ಆದರೆ ಈಗ ಆಂಧ್ರದ ಕರ್ನೂಲ್ ಜಿಲ್ಲಾ ನಂಡ್ಯಾಲ ನಲ್ಲಿ ಹೋಟೆಲು ನಡೆಸುತ್ತಿರುವನೆಂದು ವರದಿಯಾಗಿದೆ.

●

ರೇಸಿಂಗ್ ಸಮ್ಮೇಳನ

ಮಾನಿಲಾ— ನವೆಂಬರು 18 ರಿಂದ 25 ರವರೆಗೆ ನಡೆಯುವ ಏಷ್ಯಾ ರೇಸಿಂಗ್ ಸಮ್ಮೇಳನದಲ್ಲಿ 24 ದೇಶಗಳ 500 ಪ್ರತಿನಿಧಿಗಳು ಭಾಗವಹಿಸುವರೆಂದು ಆತಿಥೇಯ ಫಿಲಿಪೈನ್ಸ್ ರೇಸಿಂಗ್ ಕ್ಲಬ್ ಅಧಿಕಾರಿಯವರು ಹೇಳಿರುವರು

ಜನತಾ ಬೆಲೆ ಪಟ್ಟಿ

ನವದೆಹಲಿ— ಹೊಸದಾಗಿ ಸ್ಥಾಪಿತವಾದ ಡೆಲ್ಲಿ ರಾಜ್ಯದ ಭತ್ತ ಸಂಘರ್ಷಣ ಸಮಿತಿಯವರು ಜನತಾ ಬೆಲೆ ಪಟ್ಟಿ ಪ್ರಕಟಿಸಿರುವರು – ಅದರಲ್ಲಿರುವ ದರದಂತೆ ವಾರಲು ಸಮಿತಿಯ ಸ್ವಯಂಸೇವಕರು ನವೆಂಬರು 14 ರಿಂದ ಖಡಾಖಂಡಿತ ಜಾತಿಗೆ ಒತ್ತಾಯ ಮಾಡಲಿರುವರು.

★

ಮುನ್ಸಿಪಲ್ ಕಮಿಷನರ ಸೋಲಿ ಅಪಾದನೆ

ಹುಬ್ಬಳ್ಳಿ–ಧಾರವಾಡದ ಮುನಿಸಿಪಲ್ ಕಾರ್ಪೊರೇಷನ್ನಿನ ಕಮಿಷನರ್ ಡಾ॥ ರಂಗಪ್ಪನವರು ತಮಗೆ ತಿಳಿಸದೇ ಒಂದು ವಾರ ಪ್ರವಾಸ ಹೋದರೆಂದು ಮೇಯರ್ ಶ್ರೀ ಮಾಥಿಯಸ್‌ರಂ ಪತ್ರಿಕೆಯವರಿಗೆ ತಿಳಿಸಿದರು – ಮುಖ್ಯ ಕಾರ್ಯಕ್ರಮಗಳು ವ್ಯವಸ್ಥೆಗೊಳಿಸಲಾಗುತ್ತಿರುವಾಗ ಅವರು ಗೈರುಹಾಜರಾಗಿರುವುದು ಸರಿಯಲ್ಲವೆಂದು ಹೇಳಿದರು – ಕಮಿಷನರ ಈ ಕಾರ್ಯವು ಚುನಾಯಿತ ಪದಸ್ಥರಿಗೆ ಅಪಮಾನಕರವೆಂದು ಜನಸಂಘ ಗುಂಪಿನ ನಾಯಕ ಶ್ರೀ ಶಿವಪ್ಪ ಶೆಟ್ಟರ್ ಹೇಳಿದರು.

●

ಬ್ರಿಟನ್ನಿನ ನಿರ್ಧಾರ

ಲಂಡನ್– ಹಿಂದೂಸಾಗರದಲ್ಲಿನ ಗಾನ್ ನಕ್ಷೆನಲ್ಲಿಯ ತನ್ನ ರಾಯಲ್ ಏರ್ ಫೋರ್ಸ್ ನಿಲ್ದಾಣವನ್ನು ಬ್ರಿಟನ್ ತ್ಯಜಿಸಲು ಈಗಿನ ಕಾರ್ಮಿಕ ಮಂತ್ರಿ ಮಂಡಲವು ರಕ್ಷಣಾ ಖರ್ಚು ಖೋತಾಗಳ ಯೋಜನೆಗಳಲ್ಲಿ ಒಂದಾಗಿದೆ.

★

ಕನ್ನಡ ಚಿತ್ರಗಳ ಪ್ರದರ್ಶನ

ಮೈಸೂರು– ಕನ್ನಡ ಚಳುವಳಿಗಾರರ ಮತ್ತು ಕನ್ನಡ ಸಂಘಗಳ ನಾಯಕರ ಇಚ್ಛೆಯಂತೆ ಚಲನಚಿತ್ರ ಪ್ರದರ್ಶಕರ ಸಂಘವು ರಾಜ್ಯೋತ್ಸವದಿನದಂದು ನಗರದ ಎಲ್ಲ ಚಿತ್ರಮಂದಿರಗಳಲ್ಲೂ ಕನ್ನಡ ಚಿತ್ರಗಳನ್ನು ಪ್ರದರ್ಶಿಸಲು ನಿರ್ಧರಿಸಿದೆ.

ಜೈಪ್ರಕಾಶರ ವಿರುದ್ಧ ಕಾಂಗ್ರೆಸ್ ಚಳವಳಿ

ನವದೆಹಲಿ— ಶ್ರೀ ಜಯಪ್ರಕಾಶ ನಾರಾಯಣರ ಚಳವಳಿಗೆ ವಿರುದ್ಧ ಚಳವಳಿಯನ್ನು ಬೀಹಾರಿನಲ್ಲಿ ಪ್ರಾರಂಭಿಸಿ ದೇಶಾದ್ಯಂತ ನಡೆಸಲು ಕಾಂಗ್ರೆಸ್ ಕಾರ್ಯಕಾರಿ ಸಮಿತಿ ನಿರ್ಧರಿಸಿದೆ – ಹೊಸ ಕಾಂಗ್ರೆಸ್ ಅಧ್ಯಕ್ಷೆ ಶ್ರೀ ಬೂಅ ಸಧ್ಯದಲ್ಲೇ ಬೀಹಾರಿಗೆ ಹೋಗಲಿರುವರಂತೆ.

★

ಕೋರ್ಟು ತೀರ್ಪು ರದ್ದಿಯಾತಿಗೆ

ನವದೆಹಲಿ— ಚುನಾವಣೆ ಖರ್ಚಿನ ಬಗ್ಗೆ ಸುಪ್ರೀಂ ಕೋರ್ಟಿನ ತೀರ್ಪನ್ನು ರದ್ದುಗೊಳಿಸಲು ಉಮೇದುವಾರರ ಚುನಾವಣೆ ಖರ್ಚಿನಲ್ಲಿ ಪಾರ್ಟಿ ಮಾಡುವ ಖರ್ಚು ಸೇರಿಲ್ಲವೆಂದು ಪ್ರಜಾಪ್ರತಿನಿಧಿ ಶಾಸನದಲ್ಲಿ ತಿದ್ದುಮಾಡಿ ಸುಗ್ರೀವಾಜ್ಞೆ ಹೊರಡಿಸಲಾಗಿದೆ

★

133 ನೇ ವರ್ಷದಲ್ಲಿ ನಿಧನ

ಕುಂಭಕೋಣ— ವಲ್ಲಂ ಗ್ರಾಮದಲ್ಲಿ ಈಚೆಗೆ ನಿಧನರಾದ ಇಬ್ಬರು ಶತಾಯುಗಳ ತಾಯಿ 133 ವರ್ಷದ ವಲ್ಲಿಯಮ್ಮ ಇತ್ತೀಚೆಗೆ ಮೃತಪಟ್ಟರು ; ಅವರ ಕಣ್ಣೂ ಮತ್ತು ಹಲ್ಲೂ ಜೆನ್ನಾಗಿದ್ದಿತಂತೆ – ಆಕೆಯ ಇಬ್ಬರು ಹೆಣ್ಣು ಮಕ್ಕಳಿಗೆ 110 ಮತ್ತು 107 ವಯಸ್ಸಾಗಿರುವುದು.

●

ಬಳಕೆದಾರರ ಫೋರಂ

ಬೆಂಗಳೂರು— ಕಲಬೆರಕೆ, ಅಕ್ರಮ ದಾಸ್ತಾನು, ಕಳ್ಳಪೇಟೆ ವಿರುದ್ಧ ಹೋರಾಡಲು ಕರ್ನಾಟಕ ರಾಜ್ಯದ ಬಳಕೆದಾರರ ಫೋರಂ ಶ್ರೀ ಬಿ. ಎಸ್. ಗುಪ್ತರ ಅಧ್ಯಕ್ಷತೆಯಲ್ಲಿ ಸ್ಥಾಪಿಸಲಾಗಿದೆ.

ಬೊಂಬಾಯಿ— ಈ ವರ್ಷ ಮತ್ತೂ 1 ಲಕ್ಷ ಟನ್ ಸಕ್ಕರೆಯನ್ನು ರಫ್ತು ಮಾಡಲಾಗುವುದೆಂದು ವರದಿಯಾಗಿರುವದರಿಂದ ಬೆಲೆ ಏರುತ್ತಿದೆ.

ಮಂತ್ರಿಮಂಡಲ ಪುನರ್ರಚನೆ

ಬೆಂಗಳೂರು– ಶ್ರೀ ದೇವರಾಜ ಅರಸ್ ರವರ ಮಂತ್ರಿಮಂಡಲ ಪುನರ್ರಚನೆಯು ತಾ॥ 25 ಶುಕ್ರವಾರ ಆಗುವ ಸಂಭವವಿದೆ ಎಂದು ಗೊತ್ತಾಗಿದೆ.

★

ರಿಕ್ಷಾಗಳು ಹಿಡಿಯಲ್ಪಟ್ಟವು

ಮೈಸೂರು— ವಿನಾಯರು ಹಾಕದೆ ಹೆಚ್ಚು ಭಾರ್ಜು ತೆಗೆದುಕೊಳ್ಳುತ್ತಿದ್ದ ಬಗ್ಗೆ ನಾಲ್ಕು ರಿಕ್ಷಾಗಳನ್ನು ಲಷ್ಕರ್ ಪೋಲೀಸರು ಹಿಡಿದರು.

★

ಬೆಲೆ ಏರಿಕೆ

ನವದೆಹಲಿ– ಸೆಪ್ಟಂಬರ್ 21 ಕ್ಕೆ ಕೊನೆಗೊಂಡ ವಾರದಲ್ಲಿ ಬೆಲೆ ಮತ್ತೂ .04 ಹೆಚ್ಚಿದೆ

★

ಗಡಿ ಮುಚ್ಚಲಾಯಿತು

ಕಲ್ಕತ್ತಾ— ಕಳ್ಳಸಾಗಾಣಿಕೆ ಅಡ್ಡಿ ಕಟ್ಟಲು ಬಂಗ್ಲಾದೇಶದ ಗಡಿ ಮುಚ್ಚಲಾಯಿತು.

★

ಮೈಸೂರು ರೇಸ್

ಮೈಸೂರು— ಈ ಸಾರಿ ರೇಸಿಂಗಿನ ಕಡೇ ದಿನವಾದ ನಿನ್ನೆ ಡಿವಸ ರೇಸಿಂಗ್ ಕ್ಲಬ್ ಅಧ್ಯಕ್ಷರೂ ಮತ್ತು ಸೀನಿಯರ್ ಸ್ಟೀವರ್ಡರೂ ಆದ ಶ್ರೀ ಎಫ್. ಕೆ. ಇರಾನಿಯವರು ಛಾಂಪಿಯನ್ ಓನರ್, ಟ್ರೇನರ್, ಬುಕ್‌ಮೇಕರ್, ಟಿಪ್‌ಸ್ಟರ್‌ರಿಗೆ ಸಾರಿ ತೋಷಕವಿತ್ತರು. ಪಡೆದವರು—

ಓನರ್ ಎಸ್. ಹಿಲ್ ರೂ. 149983 ಪಣದ ಹಣ ಪಡೆದವರು

ಟ್ರೇನರ್ ಡಿ. ಹೆಚ್. ಹಿಲ್. 28 ವಿನ್ ಹೊಡೆದವರು

ಜಾಕಿ ಹೂಡ್ 21 ವಿನ್ ಗಳಿಸಿದವರು

ಬುಕ್‌ಮೇಕರ್ ನಾಗರಾಜ್ & ರಾಜಣ್ಣ

ಒಟ್ಟು ಫೀಲ್ಡ್ ಮನಿ ರೂ 1163000

ಟಿಪ್‌ಸ್ಟರ್ ಇಂಡಿಯನ್ ಎಕ್ಸ್‌ಪ್ರೆಸ್

ಬೀಹಾರ್ ಚಳವಳಿ – ಜಗಜೀವನರಾಂರ ಹೇಳಿಕೆ

ಪಾಟ್ನಾ— ಕೇಂದ್ರ ಹೊಸ ಆಹಾರ ಮಂತ್ರಿ ಶ್ರೀ ಜಗಜೀವನರಾಂರವರು, ಘಾಸಿಸ್ವು–ನಿರುದ್ಧದ ಎರಡು ದಿನಗಳ ಸಮ್ಮೇಳನದ ಸಮ್ಮೇಳನದಲ್ಲಿ ವಕ್ತನಾಡುತ್ತಾ ಶ್ರೀ ಜಯಪ್ರಕಾಶನಾರಾಯಣರು ಶಾಸನಸಭಾ ವಿಸರ್ಜನೆಯ ಕೇಳಿಕೆಯನ್ನು ತ್ಯಜಿಸಿ ದೇಶದಲ್ಲಿ ಆರ್ಥಿಕ ಮತ್ತು ಸಮಾಜಿಕ ಅಸಮಾನತೆ ನಿವಾರಣೆಗೆ ಶ್ರಮಿಸಲು ವಿನಂತಿಸಿದರು – ಜಯಪ್ರಕಾಶರು ವಿಸರ್ಜನೆಗೆ ಒತ್ತಾಯಮಾಡಿದರೆ ಸಭೆಯನ್ನು ವಿಸರ್ಜನೆ ಮಾಡುವುದೇ ಇಲ್ಲವೆಂದು – ಯಾವಾಗಲೇ ಆಗಲಿ, ಯಾವ ಚುನಾವಣೆಯಲ್ಲೇ ಆಗಲೀ, ಬಿಹಾರ್‌ನಲ್ಲಿ ಕಾಂಗ್ರೆಸ್ ವಿಜಯಗಳಿಸುವುದೆಂದು ಹೇಳಿದರು – ಬಿಹಾರ ಸರಕಾರ ದಿವಾಳಿಯಾಗಿದ್ದು, ತನ್ನ ನೌಕರರಿಗೆ ಸಂಬಳ ಕೊಡಲು ಕಿಸರ್ವ್ ಬ್ಯಾಂಕಿನ ಓವರ್‌ಡ್ರಾಫ್ಟ್ ಇಲ್ಲದೆ ಸಾಧ್ಯವಿಲ್ಲವಿಲ್ಲವೆಂದು ಒಪ್ಪಿಕೊಂಡರು.

*

ಶಾಸನಸಭೆ ವಿಸರ್ಜನೆ ಕಟ್ಟಕಡೆ ನಿಸ್ಸಂಶೆ !

ಪಾಟ್ನಾ— ಡಿಸೆಂಬರ್ 3 ಶ್ರೀ ರಾಜೇಂದ್ರಪ್ರಸಾದ್‌ರ ಜನ್ಮದಿನೋತ್ಸವದಂದಿನೊಳಗೆ ಬೀಹಾರು ಶಾಸನ ಸಭೆ ವಿಸರ್ಜನೆಗೆ ಕಟ್ಟಕಡೆ ದಿನವೆಂದು ಜಯಪ್ರಕಾಶನಾರಾಯಣರು ತಿಳುವಳಿಕೆ ಹೊರಡಿಸಿರುವರು – ಆ ತಾರೀಖಿನೊಳಗೆ ಅದು ನಡೆಸಲ್ಪಡದಿದ್ದಕ್ಕೆ, ಜನತಾ ಶಾಸನಸಭಾ ಮತ್ತು ಸಮಾಂತರ ಸರಕಾರ ಸ್ಥಾಪನೆ ಕಾರ್ಯಕ್ಕೆ ಕೈಗೊಳ್ಳಲಾಗುವುದೆಂದು ಹೇಳಿದರು.

ವುಡ್‌ಲಾಂಡ್ 18 I0 74 ರಿಂದ

ಅಮೋಘ 5 ನೇ ವಾರ

ಇಮ್ತಿಹಾನ್ ● Imtihan

★ ತನುಜ ★ ವಿನೋದ ಖನ್ನ ★ ಬಿಂದು

ಅಭಿನಯಿಸಿರುವ ಅಮೋಘ ಹಿಂದಿ ವರ್ಣಕಂಜಿತ ಕಲಾಕೃತಿ

ನಿರ್ದೇಶನ – ಮದನ್ ಸಿಂಹ ಸಂಗೀತ – ಲಕ್ಷ್ಮೀಕಾಂತ್ ಪ್ಯಾರೇಲಾಲ್

ದಿನ ೫ ಪ್ರದರ್ಶನಗಳು

ಅಪೆರಾ 17 10 74 ರಿಂದ

ಆಗಲೇ ಲಗ್ ಜಾ

ಪಾತ್ರ – ಶಶಿಕಪೂರ್ ಶರ್ಮಿಲಾ ಟಾಗೂರ್ ಶತ್ರುಘ್ನ ಸಿನ್ಹ ಓಂ ಪ್ರಕಾಶ್

ಈಸ್ಟ್‌ಮನ್ ಕಲರ್ ಚಿತ್ರ ಸಂಗೀತ – ಆರ್. ಡಿ. ಬರ್ಮನ್

ಮೋಹಕ ಅಭಿನಯದ ಮಹೋನ್ನತ ಈಸ್ಟ್‌ಮನ್ ಕಲರ್ ಹಿಂದಿ ಚಿತ್ರ

ದಿನ 3 ಪ್ರದರ್ಶನಗಳು

Help The Gorakshana

— Humanitarian Propoganda Monthly—

SHAKTI

SUDHA

A Superb Tonic

Protect the Cow

Contribute Liberally to the National Defence Fund

Quality Printing Neat Binding

Lakshminarasimha Press

Sivarampet, Mysore 1

ಭಾರತದಲ್ಲಿ ಗೋವಧೆ



ಪೂರ್ಣ ನಿಶೇಧವಾಗಲಿ

Edited Printed and Published by Dharmapracharanirata M S. Krishna Rao (Proprietor) at the Satyavadi Press, Chamaraja puram Mysore